**ಎಸ್ ಸಿ ಕೇಸ್ ನಂ.78/2019 ಪಿಡಬ್ಲ್ಯೂ.11**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 23.12.2024**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ವಿ ಆರ್ ವಕೀಲರಿಂದಃ**

1. ಸದರಿ ದಿನಾಂಕದಂದು ಠಾಣೆಗೆ ನಾನು ಬೆಳಗ್ಗೆ 8.00 ಗಂಟೆಗೆ ಬಂದಿದ್ದೆ. ಆಗ ಎಸ್ ಹೆಚ್ ಓ ರವರು ಬೆಳಗಿನ ಕರ್ತವ್ಯದ ಬಗ್ಗೆ ತಿಳಿಸಿದ್ದರು ಎಂದರೆ ಸರಿ. ಠಾಣೆಯಿಂದ ಹೋಗುವಾಗ ಎಸ್ ಹೆಚ್ ಡಿ ಯಲ್ಲಿ ಎಂಟ್ರಿ ಮಾಡುತ್ತೇವೆಂದರೆ ನಮ್ಮ ಮೇಲಾಧಿಕಾರಿಗಳು ಎಂಟ್ರಿ ಮಾಡುತ್ತಾರೆ. ಸಂಜೆ ಬಂದ ನಂತರ ಎಲ್ಲಿ ಏನು ಕರ್ತವ್ಯ ನಿರ್ವಹಿಸಿದ್ದೆ ಎಂದು ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ. ನಾನು ಹಾಗೂ ಚಾಸಾ.26 ಇಬ್ಬರೇ ಹೋಗಿದ್ದೆವು. ಠಾಣೆಯಲ್ಲಿ ಮಹಿಳಾ ಸಿಬ್ಬಂದಿಯವರು ಇದದ್ದಿರು ಎಂದರೆ ನನಗೆ ನೆನಪಿಲ್ಲ. ಸದರಿ ದಿನಾಂಕದಂದು ನಾನು ಹಾಗೂ ಚಾಸಾ.26 ರವರು ಆಸ್ಪತ್ರೆಗೆ ಭೇಟಿ ನೀಡಿರುವುದಿಲ್ಲ, ನಮ್ಮ ಸಮಕ್ಷಮ ಚಾಸಾ.1 ರವರು ಯಾವುದೇ ಹೇಳಿಕೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರ ಬಟ್ಟೆ ಜಪ್ತಿ ಮಾಡಿಕೊಳ್ಳುವ ಸಮಯದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಲಿಲ್ಲ. ಸದರಿ ದಿನಾಂಕದಂದು ಚಾಸಾ.1 ರವರ ಬಟ್ಟೆಯನ್ನು ಜಪ್ತಿ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆ ಭೇಟಿ ನೀಡದೇ ಇದ್ದರೂ ಚಾಸಾ.26 ರವರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ.1 ಅನ್ನು ಕೇಸಿಗಾಗಿ ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.